<u>ಎಲ್.ಎ.ಸಿ. ಮಿಸ್ ಸಂಖ್ಯೆ: **47/2024**</u>
<u>ಪಿ ಡಬ್ಲೂ: **1**</u>

ದಿನಾಂಕ: *24-10-2025* ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು: *3* ನೇ ಎದುರುದಾರರ ಪರವಾಗಿ ಶ್ರೀ ಕೆ.ಎಂ.ಜೆ. ವಕೀಲರಿಂದ *:-*</u>

***3.*** ಕುಂಕನಾಡು ಗ್ರಾಮದ ಸರ್ವೆ ನಂಬರು ***14/9*** ರಲ್ಲಿ ನಿಮಗೆ ಸೇರಿದ ***0.08*** ಗುಂಟೆ ಖುಷ್ಕಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಅದಕ್ಕೆ ಪರಿಹಾರವಾಗಿ ಭೂಸ್ವಾಧೀನಾಧಿಕಾರಿಗಳು ನಿಮಗೆ ರೂ.***6,36,232/-*** ಹಣವನ್ನು ನೀಡಿದ್ದಾರೆ ಎಂದರೆ ಸರಿ. ಸದರಿ ಹಣವನ್ನು ಸ್ವೀಕರಿಸುವ ಸಮಯದಲ್ಲಿ ನೀವು ಅದು ಕಡಿಮೆಯಾಗಿದೆ ಎಂದು ನೀವು ವಿರೋಧ ವ್ಯಕ್ತಪಡಿಸಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಆ ರೀತಿ ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ ಎಂದರೆ ಸರಿಯಲ್ಲ.

***4.*** ನೀವು ಕಾಲಪರಿಮಿತಿಯೊಳಗೆ ತಕರಾರು ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಕಡತದಲ್ಲಿ ಲಭ್ಯವಿದ್ದ ದಿ: ***18-11-2023*** ರಂದು ಸಾಕ್ಷಿಯು ಭೂಸ್ವಾಧೀನಾಧಿಕಾರಿಗಳಿಗೆ ಕಲಂ ***64*** ರಡಿಯಲ್ಲಿ ಸಲ್ಲಿಸಿರುವ ತಕರಾರು ಅರ್ಜಿಯನ್ನು ಸಾಕ್ಷಿಗೆ ತೋರಿಸಿ ನೀವು ಭೂಸ್ವಾಧೀನಾಧಿಕಾರಿಗಳಿಗೆ ಸಲ್ಲಿಸಿದ ಅರ್ಜಿ ಅದೇ ಎಂದು ಕೇಳಲಾಗಿ ಸಾಕ್ಷಿಯು ಅದನ್ನು ಒಪ್ಪಿ ಗುರುತಿಸಿದ ಮೇರೆಗೆ ನಿ.ಆರ್.***1*** ಎಂದು ಗುರುತಿಸಲಾಯಿತು.

*5.* ಸ್ವಾಧೀನಗೊಂಡ ಸಮಯದಲ್ಲಿ ನಿಮ್ಮ ಜಮೀನಿಗೆ ಪ್ರತಿ ಗುಂಟೆಗೆ *2* ರಿಂದ *3* ಲಕ್ಷ ರೂಪಾಯಿ ಬೆಲೆ ಬಾಳುತ್ತಿತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದನ್ನು ನಿರೂಪಿಸಲು ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

<u>ಎಲ್.ಎ.ಸಿ. ಮಿಸ್ ಸಂಖ್ಯೆ: **47/2024**</u>
<u>ಪಿ ಡಬ್ಲೂ: **1**</u>

*6.* ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದ *2* ನೇ ಪುಟದ ಮೊದಲನೇ ಖಂಡಿಕೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನೀವು ಕಾಲಪರಿಮಿತಿಯೊಳಗೆ ಭೂಸ್ವಾಧೀನ ಕಾಯ್ದೆ ಕಲಂ *64* ರಡಿಯಲ್ಲಿ ಅರ್ಜಿಯನ್ನು ಸಲ್ಲಿಸದೇ ಇರುವ ಕಾರಣ ನೀವು ಸದರಿ ಅರ್ಜಿ ಮತ್ತು ಕಡತವನ್ನು *1* ನೇ ಎದುರುದಾರರಿಂದ ತರಿಸಿಕೊಳ್ಳಬೇಕು ಎಂದು ಕೋರಿ ಸಲ್ಲಿಸಿರುವ ಪ್ರಸ್ತುತ ಅರ್ಜಿ ಕಾನೂನಿನ ಪ್ರಕಾರ ಊರ್ಜಿತವಲ್ಲ ಎಂದರೆ ಸರಿಯಲ್ಲ. ನೀವು ಪ್ರಸ್ತುತ ಅರ್ಜಿಯನ್ನು ಸಹ ಕಾಯ್ದೆಯಲ್ಲಿ ನಿಗದಿಪಡಿಸಿರುವ ಪರಿಮಿತಿಯೊಳಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನೀವು ಪ್ರಸ್ತುತ ಅರ್ಜಿಯಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ***1*** ಮತ್ತು ***2*** ನೇ ಎದುರುದಾರರ ಪರವಾಗಿ ಶ್ರೀ ಸಿ ಎಸ್ ಸರ್ಕಾರಿ ವಕೀಲರಿಂದ:</u>

**(*3* ನೇ ಎದುರುದಾರರ ಪರ ವಕೀಲರು ಮಾಡಿದ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ).**

<u>ಮರು ವಿಚಾರಣೆ: ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ